ಮೂಲ ದಾವಾ ಸಂಖ್ಯೆ. 115/2016 ಪಿ ಡಬ್ಲ್ಯೂ 2

(ದಿನಾಂಕ 03-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀಮತಿ ಎ ಎಸ್ ಬಿ ವಕೀಲರಿಂದಃ-

ಸರ್ವೆ ನಂ.104 ರಲ್ಲಿ 1 ನೇ ಪ್ರತಿವಾದಿಯು ಪೈಪ್ ಲೈನ್ ಹಾಕಿದ್ದಾರೆಂದರೆ ಸರಿ. ಸದರಿ ಸರ್ವೆ ನಂ.104 ರಲ್ಲಿ ಮೀನುಗಳನ್ನು ಸಂಗ್ರಹ ಮಾಡಲು ಗುಂಡಿಯನ್ನು ಮಾಡಿರುತ್ತಾರೆಂದರೆ ಸರಿ. ತುಂಗಭದ್ರಾ ನದಿಯಿಂದ ಜಮೀನುಗಳಿಗೆ ಪೈಪ್ ಲೈನ್ ಹಾಕಿಕೊಳ್ಳಬೇಕೆಂದರೆ 3 ನೇ ಪ್ರತಿವಾದಿಯವರಿಂದ ಪರವಾನಿಗೆ ಪಡೆಯಬೇಕೆಂದರೆ ಸರಿ.

ನನ್ನ ಜಮೀನು ಸರ್ವೆ ನಂ.107 ಇರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಪಹಣಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಸುಮಾರು 20 ವರ್ಷದಿಂದ ನನ್ನ ಜಮೀನನ್ನು ಸಾಗು ಮಾಡುತ್ತಿದ್ದೇನೆ. ನನ್ನ ಜಮೀನಿಗೆ ನಾನು ತುಂಗಭದ್ರಾ ನದಿಯಿಂದ ಪೈಪ್ ಲೈನ್ ಪಡೆದುಕೊಂಡಿಲ್ಲ. ಈ ದಾವೆ ದಾಖಲಿಸುವ ಪೂರ್ವದಲ್ಲಿ 3 ನೇ ಪ್ರತಿವಾದಿಗೆ ಸಿ ಪಿ ಸಿ ಕಲಂ. 80 ರಡಿಯಲ್ಲಿ 2 ತಿಂಗಳ ಪೂರ್ವಬಾವಿ ನೋಟೀಸನ್ನು ಕೊಟ್ಟಿರುತ್ತೇನೆ. 1 ನೇ ಪ್ರತಿವಾದಿ ಹಾಕಿರುವ ಪೈಪ್ ಲೈನಿನ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ.

(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ